**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ,ಮಲ್ಲೇಶ್ವರಂ,ಬೆಂಗಳೂರು-12**

*ಸಂ/ಪಪೂಶಿಇ/ಶೈಶಾ/ರಾವಿವೇತಂ/2021* *ದಿನಾಂಕ : 12-03-2021*

**ಅತಿ ತುರ್ತು**

**ಜ್ಞಾಪನ**

**ವಿಷಯ:** SATS PORTAL ನಲ್ಲಿ ಶುಲ್ಕಗಳನ್ನು ನಮೂದಿಸುವ ಕುರಿತು.

****

ಮೇಲಿನ ವಿಷಯದನ್ವಯ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗೆ ದಾಖಲಾದ ವಿದ್ಯಾರ್ಥಿಗಳಿಂದ ಪಡೆದ ಸರ್ಕಾರಿ ಹಾಗೂ ಸರ್ಕಾರೇತರ ಶುಲ್ಕಗಳನ್ನು SATS PORTAL ನಲ್ಲಿ ನಮೂದಿಸಲು ಅವಕಾಶ ಕಲ್ಪಿಸಲಾಗಿದ್ದು, ಇದುವರೆಗೂ ಹಲವಾರು ಕಾಲೇಜುಗಳು ಶುಲ್ಕಗಳನ್ನು ನಮೂದಿಸದೇ ಇರುವದನ್ನು ಗಮನಿಸಲಾಗಿದೆ. ಇದರಿಂದ ಸದರಿ ಮಾಹಿತಿಯನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಶ (SSP) ಕ್ಕೆ ವರ್ಗಾಯಿಸಲು ತೊಂದರೆಯುಂಟಾಗುತ್ತಲಿದೆ . ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಅರ್ಜಿ ಸಲ್ಲಿಸುವಾಗ ತೊಂದರೆ ಅನುಭವಿಸುತ್ತಲಿದ್ದಾರೆ. ಕಾರಣ ಶೀಘ್ರವಾಗಿ SATS PORTAL ನಲ್ಲಿ ವಿದ್ಯಾರ್ಥಿಗಳು ಪಾವತಿಸಿದ ಶುಲ್ಕಗಳನ್ನು ನಮೂದು ಮಾಡಲು ಸೂಚಿಸಲಾಗಿದೆ. ಒಂದು ವೇಳೆ ಶುಲ್ಕ ನಮೂದಿಸದೇ, ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯುವಲ್ಲಿ ತೊಂದರೆ ಉಂಟಾದರೆ,ಆಯಾ ಕಾಲೇಜಿನ ಪ್ರಾಚಾರ್ಯರು ಹೊಣೆಗಾರರಾಗುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಿದೆ.

ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (SSP) ದಲ್ಲಿ ವಿದ್ಯಾರ್ಥಿಗಳು 2020-21 ಸಾಲಿಗೆ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸುವ ಸಂಬಂಧ https://ssp.postmatric.karnataka.gov.in ಇಲ್ಲಿ ಅರ್ಹತೆ ಪರಿಶೀಲಿಸಿ, ಅರ್ಜಿ ಸಲ್ಲಿಸಬಹುದಾಗಿದೆ. ಕಳೆದ ವರ್ಷ (2019-20) ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಿ, ಮಂಜೂರಾತಿ ಪಡೆದಿದ್ದರೂ,ಪ್ರಸ್ತುತ ವರ್ಷಕ್ಕೆ(2020-2021) ಪುನ: ಅರ್ಜಿ ಸಲಿಸುವದು ಕಡ್ಡಾಯವಾಗಿದೆ.ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಸಲ್ಲಿಸುವಲ್ಲಿ ಉಂಟಾಗುವ ತೊಂದರೆಗಳಿಗೆ ಈ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ. ವಿದ್ಯಾರ್ಥಿಗಳಲ್ಲಿ ಸದರಿ ವಿಷಯವನ್ನು ಪ್ರಸಿದ್ಧಿಪಡಿಸುವದು

**ರಾಜ್ಯ ವಿದ್ಯಾರ್ಥಿವೇತನ ತಂತ್ರಾಶ (SSP) ಸಹಾಯವಾಣಿ**

1. 08035254757
   ಇಮೇಲ್ ವಿಳಾಸ: postmatrichelp@karnataka.gov.in

R Kusum 12/03/2021

ಜಂಟಿ ನಿರ್ದೇಶಕರು (ಶೈಕ್ಷಣಿಕ) ಹಾಗೂ
ನೋಡಲ್ ಅಧಿಕಾರಿಗಳು (SSP)
ಪದವಿ ಪೂರ್ವ ಶಿಕ್ಷಣ ಇಲಾಖೆ

ಗೆ,

1. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ ಮುಂದಿನ ಕ್ರಮಕ್ಕಾಗಿ ( ಉಪನಿರ್ದೇಶಕರ ಮೂಲಕ)
2. ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ – ಅನುಸರಣಾ ಕ್ರಮಕ್ಕಾಗಿ